# ಮಕ್ಕಳ ಕಥಾ ಸಾಹಿತ್ಯಕ್ಕೆ ಎಚ್ಚೆಸ್ವಿ ಅವರ ಕೊಡುಗೆ

**ಮಹೇಶ ಎಂ.**

ಅತಿಥಿ ಉಪನ್ಯಾಸಕರು, ಕನ್ನಡ ಸ್ನಾತಕೋತ್ತರ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

**Received: 15/10/2024 ; Acepted: 01/11/2024 ; Published: 30/11/2024**

**DOI: https://doi.org/10.5281/zenodo.14246323**

## ABSTRACT:

ಮಕ್ಕಳ ಕಥೆಗಳಲ್ಲಿ ನಾವು ಗಮನಿಸಬಹುದಾದಂತಹ ಪ್ರಮುಖವಾದ ಅಂಶಗಳು ಕುತೂಹಲ, ಆಶ್ಚರ್ಯ, ವಿಸ್ಮಯ, ವಿನೋದ, ಬೆರಗು, ಭಯ, ಉತ್ಸಾಹ, ಮನೋರಂಜನೆ, ಛಲ, ಹಟ, ಆವೇಶ, ಚಾಕಚಕ್ಯತೆ ಇತ್ಯಾದಿಗಳಾಗಿವೆ. ಮಕ್ಕಳ ಕಥಾ ಸಾಹಿತ್ಯದಲ್ಲಿ ದೇವುಡು ಅವರ 'ಕನ್ನಡಿಯ ಕಥೆ', ಪಂಜೆ ಅವರ ‘ಒಡ್ಡನ ಆಟ’ ಪಂಡಿತ ಕವಲಿ ಅವರ ‘ಪುಟ್ಟಣ್ಣನ ಪಂಚತಂತ್ರ’, ಗೌರೀಶರ ‘ನಾಡನೆಲೆಗಾರ’, ದಾಮೋದರ ಬಾಳಿಗರ ‘ಇಲಿಮನೆ ಗಲಿಬಲಿ’, ಹೊಯ್ಸಳರ ‘ಆನೆ–ಇರುವೆ’, ಭಾರತೀಸುತರ ‘ಬೆಳೆಯಿತು ಮೂಗು ನೋಡಣ್ಣ’, ಶಂಕರಭಟ್ಟರ ‘ಪ್ರಾಣಿಗಳ ಪ್ರವಾಸ’, ಮೇವುಂಡಿ ಮಲ್ಲಾರಿ ಅವರ ‘ಕಳೆದ ಕಡಲೆ’, ಜಿ.ಪಿ. ರಾಜರತ್ನಂ ಅವರ ‘ಗೋಳೂರಿನ ಗಾಯಕರು’, ವಿಶ್ವಾಮಿತ್ರ ಅವರ ‘ತುಂಟ ಬೋರಣ್ಣ’, ಕುವೆಂಪು ಅವರ ‘ನರಿಗಳಿಗೇಕೆ ಕೋಡಿಲ್ಲ?’, ಪಾಂಡುರಂಗರಾಯರ ಸಕ್ಕರೆಬೆಟ್ಟ, ಸಿಸು ಸಂಗಮೇಶ ‘ಅವರ ನರಿಯ ಫಜೀತಿ’, ಜಯವಂತ ಕಾಡದೇವರ ‘ಮಾತಾಡುವ ಗಿಳಿ’, ಎ. ವಿ. ನಾವಡ ಅವರ 'ರಾಜಹಂಸ', 'ಮಧುಚಂದ್ರ', 'ಪೇಟೆಗೆ ಬಂದ ಪುಟ್ಟಿ' ಇವು ಪ್ರಮುಖವಾದ ಕೃತಿಗಳಾಗಿವೆ. ಇತ್ತೀಚೆಗೆ ಸಮಕಾಲೀನ ಸಂದರ್ಭದ ಮಹತ್ವದ ಕವಿ ಮತ್ತು ಪ್ರಯೋಗಶೀಲ ನಾಟಕಕಾರ ಎಂದು ಗುರುತಿಸಲ್ಪಟ್ಟಿರುವ ಎಚ್. ಎಸ್.ವೆಂಕಟೇಶಮೂರ್ತಿ ಅವರು ಅನೇಕ ವರ್ಷಗಳಿಂದ ಮಕ್ಕಳಿಗಾಗಿ ಕವಿತೆ, ನಾಟಕ, ಕಥೆಗಳನ್ನು ರಚಿಸುತ್ತ, ಪ್ರಕಾಶಿಸುತ್ತ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಇವರ ಅಮಾನುಷರು, ಕದಿರನಕೋಟೆ, ಅಗ್ನಿಮುಖಿ, ಚಿನ್ನಾರಿಮುತ್ತ, ತಾಪಿ ಕೃತಿಗಳು ಮಕ್ಕಳಿಗಾಗಿಯೇ ರಚಿತವಾದುವಾಗಿವೆ.

ಈ ಲೇಖನದಲ್ಲಿ ಎಚ್ಚೆಸ್ವಿ ಅವರ ಅಗ್ನಿಮುಖಿ, ಕದಿರನಕೋಟೆ, ಅಮಾನುಷರು ಕಥೆಗಳಲ್ಲಿ ಬಿಂಬಿತವಾಗಿರುವ ಕಥಾವಸ್ತುವನ್ನು ವಿವೇಚನೆಗೆ ಒಳಪಡಿಸಲಾಗಿದೆ.

## KEYWORDS:

ಎಚ್ಚೆಸ್ವಿ, ಮಕ್ಕಳ ಕಥೆಗಳು, ಅಗ್ನಿಮುಖಿ, ಅಮಾನುಷರು, ಕದಿರನ ಕೋಟೆ.

ಮಕ್ಕಳ ಸಾಹಿತ್ಯದ ಮೂಲ ಬೇರು ಜಾನಪದ ಸಾಹಿತ್ಯದಲ್ಲಿ ಅಡಗಿದೆ. ಮಕ್ಕಳು ಅಳುವಾಗ, ಹಟ ಮಾಡುವಾಗ ತಾಯಂದಿರು, ಅಜ್ಜಿಯರು, ಹಿರಿಯರು ಮಕ್ಕಳನ್ನು ಸಂತೈಸಲು ಹೇಳುವ ಹಲವು ಕಥೆಗಳು, ಹಾಡುಗಳು ಮಕ್ಕಳಿಗೆ ಹಿತವಾಗುವ, ರಮಿಸಿ ರಂಜಿಸುವ ರೀತಿಯಲ್ಲಿವೆ. ಅವು ನೀತಿಬೋಧಕವೂ ಕಲ್ಪನಾ ಸಾಮ್ರಾಜ್ಯವನ್ನು ವಿಸ್ತರಿಸುವಂಥವುಗಳೂ ಆಗಿವೆ. ಜನಪದರ ಮಕ್ಕಳ ಹಾಡು ಮತ್ತು ಕಥೆಗಳು, ಲಾಲಿ ಹಾಡುಗಳು ಕಿವಿಯಿಂದ ಕಿವಿಗೆ ಮೇಳೈಸಿ ಬಾಯಿಂದ ಬಾಯಿಗೆ ಹರಿದುಬಂದಿವೆ. ಒಗಟು, ಜಾಣ್ಮೆಯ ಲೆಕ್ಕ, ಭೂತ-ಪ್ರೇತ, ರಾಜ-ರಾಣಿಯರ, ರಾಕ್ಷಸರ, ದೇವಿದೇವತೆಯರ ಕಥೆಗಳು ಅದ್ಭುತ ರಮ್ಯ ಕುತೂಹಲಕರವಾಗಿದ್ದು ಮಕ್ಕಳ ಮಾನಸಿಕ, ಬೌದ್ಧಿಕ, ಕಾಲ್ಪನಿಕ ಅಂಶಗಳಿಂದ ಅವರ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿವೆ.

ಪೌರಾಣಿಕ ಕಥೆಗಳು, ಜಾನಪದ ಕಥೆಗಳು, ಐತಿಹಾಸಿಕ ಕಥೆಗಳು, ಪಶು-ಪಕ್ಷಿಗಳು, ಪ್ರಕೃತಿ ಸಂಪತ್ತಿನ ಕಥೆಗಳು, ಕಿನ್ನರ ಕಥೆಗಳು, ಸಾಹಸದ ಕಥೆಗಳು, ಪ್ರವಾಸ ಕಥೆಗಳು, ಸಾಮಾಜಿಕ ಕಥೆಗಳು ಹೀಗೆ ಮಕ್ಕಳಿಗೆ ಸಂಬಂಧಿಸಿದಂತೆ ಅನೇಕ ಪ್ರಕಾರದ ಮಕ್ಕಳ ಕಥೆಗಳು ಪ್ರಕಟವಾಗಿರುವುದನ್ನು ನಾವು ಕಾಣಬಹುದಾಗಿದೆ. ರಾಮಾಯಣ, ಮಹಾಭಾರತಗಳಲ್ಲಿ ಮಕ್ಕಳ ಬಾಲಲೀಲೆ, ಶೌರ್ಯ, ಸಾಹಸಗಳನ್ನು ಕುರಿತ ಅನೇಕ ಪ್ರಸಂಗಗಳಿವೆ. ಕೃಷ್ಣನ ಬಾಲಲೀಲೆಗಳಂತೂ ವೈವಿಧ್ಯಮಯವಾಗಿವೆ. ಈ ಲೀಲೆಗಳು ಅಸಂಖ್ಯಾತ ಕಥೆ ಗದ್ಯ-ಪದ್ಯಗಳಾಗಿ ರಂಜಿಸುತ್ತವೆ. ಆದರೆ ಇವು ಯಾವುವೂ ಮಕ್ಕಳಿಗಾಗಿಯೇ ಬರೆದ ಸಾಹಿತ್ಯವಲ್ಲವೆಂಬುದು ಬಹಳ ವಿಷಾದಕರವಾದ ಸಂಗತಿಯಾಗಿದೆ.

ಈ ಅಂಶಗಳನ್ನು ಆಧರಿಸಿ ಎಚ್ಚೆಸ್ವಿ ಅವರ ಮಕ್ಕಳ ಕಥೆಗಳಲ್ಲಿ ವ್ಯಕ್ತವಾಗಿರುವ ಮೌಲಿಕ ಅಂಶಗಳನ್ನು ಮುಖ್ಯವಾಹಿನಿಗೆತರುವ ಪ್ರಯತ್ನ ಮಾಡಿದ್ದೇನೆ.

**ಅಗ್ನಿಮುಖಿ:**

ದಸರಾ ರಜೆಯನ್ನು ಮೋಜು, ಮಸ್ತಿಯೊಂದಿಗೆ ಕಳೆಯಲು ಮಂಗಳೂರು ಸಮೀಪದ ಸುರತ್ಕಲ್‌ನಲ್ಲಿರುವ ತನ್ನ ಚಿಕ್ಕಪ್ಪನ ಮನೆಗೆ ಬಂದ ಸುಧೀರ ಮತ್ತು ಡುಬ್ಬುವು ತಮ್ಮ ಪ್ರವಾಸವನ್ನು ಅತ್ಯಂತ ಸೌಮ್ಯ ಹಾಗೂ ಲೋಕಾಭಿರಾಮವಾಗಿ ಮುಗಿಸಬೇಕೆಂದುಕೊಂಡಿದ್ದರೂ ಪ್ರವಾಸವು ರೋಮಾಂಚನಕಾರಿಯಾದ ಸಾಹಸವಾಗಿ ಪರಿಣಮಿಸಿದ್ದನ್ನು ಕಂಡು ಬಹಳ ಆತಂಕ, ಆಶ್ಚರ್ಯಕ್ಕೊಳಗಾಗುವರು.

ಸುಧೀರ, ಡುಬ್ಬು, ರಂಗು ಮೂವರೂ ದಿನಾ ಮನೆಯ ಹತ್ತಿರವಿರುವ ಸಮುದ್ರದ ತೀರಕ್ಕೆ ಹೋಗಿ ಮಿಂದು ಆಟವಾಡಿ ಬರುತ್ತಿದ್ದರು. ಹೀಗಿರುವಾಗ ಡುಬ್ಬು ಸಮುದ್ರದ ನೀರಿನ ಮೇಲೆ ನಾವೆಲ್ಲರೂ ದೂರದ ಪ್ರಯಾಣ ಮಾಡೋಣ ಎಂದು

ತನ್ನ ಬಯಕೆಯನ್ನು ತಿಳಿಸುವನು. ಇದಕ್ಕೆ ರಂಗು, ಸುಧೀರ ಇಬ್ಬರೂ ಒಪ್ಪಿಗೆಯನ್ನು ಸೂಚಿಸುವರು. ರಂಗು ತನ್ನ ಅಣ್ಣಂದಿರನ್ನು ತನ್ನ ಸಹಪಾಠಿ ಹಾಗೂ ಮೊಗೇರರ ಹುಡುಗನಾದ ಧೂಮನಿಗೆ ಪರಿಚಯ ಮಾಡಿಕೊಟ್ಟು ಸಮುದ್ರ ಪ್ರಯಾಣಕ್ಕೆ ಸಿದ್ಧತೆಯನ್ನು ಮಾಡುವಳು.

ವಿಜಯದಶಮಿ ದಿನ ಸಂಜೆಯ ವೇಳೆಯಲ್ಲಿ ಮೂವರೂ, ಸಮುದ್ರ ಪ್ರಯಾಣವನ್ನು ಆರಂಭಿಸಿ ರೋಮಾಂಚನಗೊಳ್ಳುವರು. ಸ್ವಲ್ಪ ಸಮಯದ ನಂತರ ರಂಗು, ಸುಧೀರ ಕತ್ತಲೆಯಾಗಿದೆ, ಸಮಯವೂ ಮೀರಿದೆ ವಾಪಸ್ ಹೋಗೋಣವೆಂದರೂ, ಧೂಮನು ಅವರ ಮಾತನ್ನು ಕೇಳದೆ, ಇಲ್ಲೇ ಸಮೀಪದಲ್ಲಿ ನಲಾಗಿರಿಯ ಶಿಖರ ಅಥವಾ ಪಿಶಾಚಿಯ ಚುಟ್ಟ ಇದೆ. ಅದನ್ನು ನೋಡಿಯೇ ಬರೋಣವೆಂದು ತಿಳಿಸಿ ತನ್ನ ಲಾಂಚ್ ಅನ್ನು ಮುಂದೆ ಓಡಿಸುವನು. ಲಾಂಚ್ ಮುಂದೆ ಪ್ರಯಾಣ ಬೆಳೆಸಿದಂತೆ ಸಮುದ್ರದಲ್ಲಿರುವ ಕೋಡುಗಲ್ಲಿಗೆ ಡಿಕ್ಕಿ ಹೊಡೆದು ಅಪಾಯಕ್ಕೀಡಾದಾಗ, ಎಲ್ಲರೂ ಸಮುದ್ರದಲ್ಲಿ ಈಜಿ ನಲಾಗಿರಿಯ ಬುಡವನ್ನು ಸೇರುವರು. ನಂತರ ನಲಾಗಿರಿಯ ಬುಡದಲ್ಲಿಯೇ ವಾಸ್ತವ್ಯ ಹೂಡಿ ತಾವು ತಂದಿದ್ದ ತಿಂಡಿಯನ್ನು ತಿಂದು ಅಂದಿನ ರಾತ್ರಿಯನ್ನು ಬಂಡೆಗಳ ಮೇಲೆ ಮಲಗಿ ಕಾಲ ಕಳೆದರು. ಮಾರನೆಯದಿನ ನಲಾಗಿರಿಯ ಬುಡವನ್ನು ಎಲ್ಲರೂ ಶೋಧನೆ ಮಾಡಿದರು. ಎಲ್ಲೂ ಆಹಾರ, ಕುಡಿಯುವ ನೀರಿನ ಸುಳಿವು ಸಿಗದೇ ಇದ್ದಾಗ ಆಕಾಶದಲ್ಲಿ ಹಕ್ಕಿಗಳು ಹಾರಾಡುತ್ತಿರುವುದನ್ನು ಗಮನಿಸಿ ಶಿಖರದ ಮೇಲೆ ಆಹಾರ, ನೀರು ಸಿಗಬಹುದೆಂದು ತಿಳಿದು ಎಲ್ಲರೂ ಶಿಖರವನ್ನೇರುವರು.

ನಲಾಗಿರಿಯ ಶಿಖರದ ಮೇಲೆ ಆಹಾರ, ನೀರು ಸಿಗದಿದ್ದಾಗ ಕಾಡಿನಲ್ಲಿ ದೊರಕುವ ಹಣ್ಣುಗಳನ್ನು ತಿಂದು ಹಸಿವು ನೀಗಿಸಿಕೊಂಡರು. ಮಳೆಯ ನೀರನ್ನು ವಾಟರ್ ಬ್ಯಾಗ್‌ನಲ್ಲಿ ಸಂಗ್ರಹಿಸಿ ಆ ನೀರನ್ನು ಕುಡಿದು ದಾಹ ತೀರಿಸಿಕೊಂಡರು. ಹಾಗೂ ಗುಹೆಯನ್ನು ಸ್ವಚ್ಛಗೊಳಿಸಿ ಅಲ್ಲಿಯೇ ಮಲಗಿ ವಿಶ್ರಾಂತಿಯನ್ನು ಪಡೆದರು. ನಲಾಗಿರಿಯ ಶಿಖರದ ಮೇಲೆ ಬರೆದಿರುವ ಅಕ್ಷರಗಳು, ಬಂಡೆಗಳಲ್ಲಿ ಹೊಡೆದಿರುವ ಮೊಳೆಗಳನ್ನು ಗುರುತಿಸಿ ಇಲ್ಲಿಗೆ ನಮಗಿಂತ ಮೊದಲೇ ಯಾರೋ ಬಂದು ಹೋಗಿದ್ದಾರೆ ಎಂಬ ಸಂಗತಿಯನ್ನು ಪತ್ತೆ ಹಚ್ಚಿದರು. ಈ ಹಿನ್ನೆಲೆಯಲ್ಲಿ ನಲಾಗಿರಿಯನ್ನು ಶೋಧನೆ ನಡೆಸಿದಾಗ ಜೋಶಿ ಎಂಬ ವ್ಯಕ್ತಿಯು 'ಈ ಶಿಖರದಲ್ಲಿ ನೀಲಿರತ್ನ ಹಾಗೂ ಹವಳದ ನಿಕ್ಷೇಪವಿದೆ' ಎಂದು ತಿಳಿದು ಇಲ್ಲಿಗೆ ಬಂದು ಅಗ್ನಿಮುಖಿಯ ಕೊಂಡದಲ್ಲಿ ಸಿಕ್ಕಿ, ಸಾವು ಬದುಕಿನ ನಡುವೆ ಜೀವಿಸುತ್ತಿದ್ದನು. ಜೋಶಿಯನ್ನು ಪತ್ತೆ ಹಚ್ಚಿದ ಹುಡುಗರು ಅವನು ಇಲ್ಲಿಗೆ ಬಂದ ಉದ್ದೇಶ, ಇಲ್ಲಿ ನಡೆದ ಸಂಗತಿಗಳನ್ನು ಕೇಳಿ ತಿಳಿದುಕೊಂಡರು. ನಂತರ ಸಾವಿನ ದವಡೆಯಲ್ಲಿ ಸಿಲುಕಿದ್ದ ಜೋಶಿಯನ್ನು ಪಾರುಮಾಡಿದರು.

ಜೋಶಿಯು ಇಲ್ಲಿಗೆ ಪ್ರಯಾಣ ಬೆಳೆಸುವಾಗ ಬಂದಿದ್ದ ನಾಡದೋಣಿಯ ಸಹಾಯದಿಂದ ಹುಡುಗರು ಹಾಗೂ ಜೋಶಿಯು ಮತ್ತೆ ಸಮುದ್ರ ತೀರಕ್ಕೆ ಪ್ರಯಾಣ ಬೆಳೆಸಿ, ಅಗ್ನಿ ಮುಖಿಯಿಂದ ತಮ್ಮ ಜೀವಗಳಿಗೆ ಬರಬಹುದಾಗಿದ್ದ ತೊಂದರೆಯಿಂದ ಪಾರಾಗಿ ತಮ್ಮ ಜೀವ ಉಳಿಸಿಕೊಳ್ಳುವುದು ಈ ಕಥೆಯ ವಸ್ತುವಾಗಿದೆ.

**ಆಶಯ:**

ಸಮುದ್ರಯಾನದ ಉತ್ಸಾಹ ಹುಡುಗರಿಗೆ ಬೆರಗನ್ನು ಹುಟ್ಟಿಸಿ ಸಾವಿನ ಸಂಕೋಲೆಯಿಂದ ಬಿಡಿಸಿಕೊಂಡು, ಸಾವಿನ ದವಡೆಯಲ್ಲಿ ಸಿಲುಕಿದ್ದ ಬೇರೊಂದು ಜೀವ ರಕ್ಷಿಸಿ ಮಾನವೀಯತೆ ಮೆರೆದಿರುವುದು ಈ ಕಥೆಯ ಆಶಯವಾಗಿದೆ. ತಮಗೆ ಎದುರಾದ ಭಯ, ಆತಂಕ, ದುಃಖದ ಸಂಗತಿಗಳನ್ನು ಛಲ, ತಾಳ್ಮೆ, ಸಹನೆ, ಉಪಾಯ, ಶಕ್ತಿಯಿಂದ ಎದುರಿಸಿ ಸಾಹಸ ಮನೋಭಾವದಿಂದ 'ಜೀವ'ವನ್ನೇ ಗೆದ್ದು ಬಂದ ಹುಡುಗರ ಮನೋಸ್ಥೈರ್ಯವನ್ನು ಮೆಚ್ಚಲೇಬೇಕಾಗಿದೆ.

"ಜೀವನದ ಬಹಳ ದೊಡ್ಡ ಅರ್ಥ ಸಾವಿನ ವಿರುದ್ಧ ಹೋರಾಡುವುದು ಹಾಗೂ ತಾವೂ ಬದುಕಿ, ಸಮಸ್ಯೆಯ ಸುಳಿಯಲ್ಲಿ ಸಿಲುಕಿರುವವರನ್ನು ಬದುಕಿಸುವುದಕ್ಕಾಗಿ ಹೋರಾಡುವುದರಲ್ಲಿ ಭಾರಿ ಮಜಾ ಇದೆ"[1] ಎಂಬುದನ್ನು ಹುಡುಗರ ಸಾಹಸ ಪ್ರವೃತ್ತಿಯಿಂದ ಅರಿತುಕೊಳ್ಳಬಹುದಾಗಿದೆ. ಸಮುದ್ರಯಾನದ ಅನುಭವದಿಂದ 'ಭೂಮಿ ಇಷ್ಟು ಸುಂದರ ಅಂತ ನಮಗೆ ಗೊತ್ತೇ ಇರಲಿಲ್ಲ' ಎಂದು ಪುಳಕಿತಗೊಳ್ಳುವ ಮಕ್ಕಳ ವಾಂಛೆಯನ್ನು ಎಚ್ಚೆಸ್ವಿ ಇಲ್ಲಿ ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ. ಒಟ್ಟಾರೆಯಾಗಿ ಈ ಕಥೆಯು ಮಕ್ಕಳಲ್ಲಿ ಕುತೂಹಲ, ಧೈರ್ಯ ಸಾಹಸಪ್ರವೃತ್ತಿಯನ್ನು ಪ್ರಚೋದಿಸುವಂತಿದ್ದು; ಅವರಿಗೆ ಆನಂದವನ್ನು ಉಂಟುಮಾಡುವ ಪರಿಣಾಮಕಾರಿ ಕಥೆಯಾಗಿದೆ.

**ಅಮಾನುಷರು:**

ಚಿತ್ರದುರ್ಗದ ಚಂದ್ರವಳ್ಳಿಯ ಸಮೀಪದಲ್ಲಿ ರಣಹದ್ದೊಂದು ರೆಕ್ಕೆ ಬಿಚ್ಚಿ ಕೂತಿರುವಂತೆ ಭಾಸವಾಗುವ ಕೋಡುಗಲ್ಲಿನ ಕೋಟೆ ಮತ್ತು ಧವಳಗಿರಿ ವೀಕ್ಷಣೆ ಮಾಡಲು ಎಚ್ಚೆಸ್ವಿ, ಅಪ್ರಮೇಯ ಪ್ರಸನ್ನ, ಸ್ಮಿತಾ, ಧವಳಪ್ಪ, ಜೋಷಿ ಅವರು ಬೆಳಗಟ್ಟದ ಗಣಪತಿ ಶಾಸ್ತ್ರೀ ಪಂಡಿತಾರಾಧ್ಯರ ಜೊತೆಗೂಡಿ, ಅವರ ಮಾರ್ಗದರ್ಶನದೊಂದಿಗೆ ಪ್ರಯಾಣ ಬೆಳೆಸಿದರು. ಈ ಪ್ರಯಾಣ ಬಹಳ ಸೋಜಿಗ ಹಾಗೂ ತ್ರಾಸದಾಯಕವಾಗಿತ್ತು. ಅಲ್ಲಿನ ನಿಸರ್ಗದ ಕತ್ತಲ ಗವಿಯೊಳಗಿನ ಪ್ರವೇಶ ಮತ್ತು ಅನುಭವ ವಿಚಿತ್ರವಾಗಿತ್ತು. ಇವರು ತಮ್ಮ ಪ್ರಯಾಣದ ಉದ್ದಕ್ಕೂ ವಿವಿಧ ಬಗೆಯ ಬಂಡೆಗಳು, ವನಸಿರಿಯ ಸೊಬಗು, ಜಲಪಾತ, ಸರೋವರ, ಕಾಡು–ಮೇಡು, ಲಿಂಗಗಳನ್ನು ನೋಡಿ ಪುಳಕಿತಗೊಳ್ಳುತ್ತಿದ್ದರು.

ಇವರಲ್ಲಿನ ಜೋಷಿ ಒಬ್ಬ ರಾಕ್‌ಹೌಂಡ್. ನಾನಾ ಬಗೆಯ ಶಿಲೆಗಳನ್ನು ಸಂಗ್ರಹಿಸುವುದು ಅಧ್ಯಯನ ಮಾಡುವುದು ಅವನ ಹವ್ಯಾಸ. ಈತ ಪ್ರಯಾಣದ ಉದ್ದಕ್ಕೂ ಶಿಲೆಗಳನ್ನು ಪರೀಕ್ಷಿಸಿ, ಅವುಗಳ ಚೂರುಗಳನ್ನು ಸಂಗ್ರಹಿಸಿಕೊಂಡು ಮುಂದಡಿಯಿಡುತ್ತಿದ್ದನು. ಈ ಮಧ್ಯೆ ಅಲ್ಲಿನ ಸರೋವರದ ಆಳದಲ್ಲಿ ನೂರಾರು ಹಸುರು ದೀಪಗಳನ್ನು ಹಚ್ಚಿಟ್ಟಂತೆ ಇಡೀ ಸರೋವರವೇ ಹಸುರಿನ ಬೆಳಕು ಚೆಲ್ಲುತ್ತಾ ಹೊಳೆಯುತ್ತಿತ್ತು. ಆ ಸರೋವರದ ಸೌಂದರ್ಯವನ್ನು ನೋಡಿ ಎಲ್ಲರೂ ವಿಸ್ಮಯಗೊಂಡರು. ಸರೋವರದ ಆಳದಿಂದ ಹಸುರು ಹಸುರಾಗಿ ಚಿಮ್ಮಿ ಬರುತ್ತಿರುವ ಆ ಬೆಳಕಿನ ಕಿರಣಗಳು 'ಬೆರಿಲ್' ಎಂಬ ಖನಿಜದಿಂದ ಉಂಟಾಗುವ ಹಸುರು ರತ್ನ ಅಥವಾ ಮರಕತದಿಂದ ಹೊಮ್ಮುತ್ತಿರುವ ಬೆಳಕು ಎಂಬುದನ್ನು ಜೋಷಿ ಎಲ್ಲರಿಗೂ ಮನವರಿಕೆ ಮಾಡಿಕೊಟ್ಟನು. ಜೊತೆಗೆ ಈ ರತ್ನದ ಬೆಲೆ ಸುಮಾರು 10 ಕೋಟಿ ರೂಪಾಯಿಯನ್ನು ಮೀರುತ್ತದೆ, ಅದನ್ನು ಮಾರಿ ಬಂದ ಹಣದಲ್ಲಿ ನಾವು ಮಾತ್ರವಲ್ಲ ನಮ್ಮ ಮಕ್ಕಳು ಮೊಮ್ಮಕ್ಕಳೂ ಲಕ್ಷಾಧೀಶರಾಗಿ ಸುಖ ಪಡಬಹುದು ಎಂದನು. ಇದನ್ನು ಕೇಳಿದ ಎಲ್ಲರೂ ಶ್ರೀಮಂತರಾಗುವ ಕನಸು ಕಂಡರು.

ಅನಂತರದಲ್ಲಿ ಈ ಹಸುರು ರತ್ನವನ್ನು ಶತಾಯಗತಾಯ ಸಂಪಾದಿಸಲೇಬೇಕೆಂಬುದು ಎಲ್ಲರ ದೃಢ ನಿರ್ಧಾರವಾಯಿತು. ಬಹಳ ಪರಿಶ್ರಮದಿಂದ ಎರಡು–ಮೂರು ದಿನಗಳ ಕಾಲ ಸರೋವರದ ನೀರಿನೊಳಗೆ ಮುಳುಗಿ ಮರಕತ ಅಂಟಿಕೊಂಡಿದ್ದ ಬಂಡೆಯಿಂದ ಅದನ್ನು ಬೇರ್ಪಡಿಸಿ ಮೇಲೆ ತಂದರು. ಪಾರದರ್ಶಿಯಾಗಿದ್ದ ಆ ಮರಕತದ ಹರಳು ಸೂರ್ಯನ ಪ್ರಕಾಶಕ್ಕೆ ಚಿತ್ರವಿಚಿತ್ರವಾಗಿ ಹಸುರು ಕಾಂತಿಗಳನ್ನು ಚೆಲ್ಲುತ್ತಾ ಬೆಳಗುತ್ತಿತ್ತು. ಅದನ್ನು ನೋಡಿ ಎಲ್ಲರೂ ಹರ್ಷಚಿತ್ತರಾದರು.

ಇವರೆಲ್ಲರ ಮನಸ್ಸಿನಲ್ಲಿ ಮೂಡಿದ್ದ ಸಂತೋಷ ಕೇವಲ ಕ್ಷಣಿಕವಾಗಿತ್ತು. "ಪ್ರಕೃತಿಯ ಅಗಾಧವಾದ ಐಶ್ವರ್ಯವೊಂದನ್ನು ಕದಿಯುತ್ತಿರುವ ಕಳ್ಳರು ಇವರು ಎಂದು ಭಾವಿಸಿದ ನಿಸರ್ಗ ರೌದ್ರಾವೇಶ ತಾಳಿತು. ಸುತ್ತಲ ಶಿಲಾಪರ್ವತಗಳಲ್ಲಿ ಹುದುಗಿದ ಯಾರೋ ಅಮಾನುಷರು ಗುರಿಯಿಟ್ಟು ನಮಗೆ ಕಲ್ಲು ಬೀಸುತ್ತಿರುವಂತೆ ತೋರಿತು."[2] ಇದರಿಂದ ಭಯಭೀತರಾದ ಅವರು ತಾವು ಸಂಪಾದಿಸಿದ ರತ್ನದ ಜೊತೆಗೆ ತಮ್ಮ ಜೀವದ ಉಳಿವಿಗಾಗಿ ಹರಸಾಹಸ ಪಡಬೇಕಾಯಿತು. ವಿಷಾದದ ಸಂಗತಿ ಎಂದರೆ ಗಣಪತಿ ಶಾಸ್ತ್ರೀ ಪಂಡಿತಾರಾಧ್ಯರೇ ಇವರ ಗುಂಪಿನಲ್ಲಿದ್ದ ಅಪ್ರಮೇಯ ಪ್ರಸನ್ನ ಹಾಗೂ ಧವಳಪ್ಪ ಅವರ ನಿಗೂಢ ಸಾವಿಗೆ ಕಾರಣರಾದರು. ಕೊನೆಗೆ ಜೋಷಿ, ಸ್ಮಿತಾ, ಎಚ್ಚೆಸ್ವಿ ಅವರುಗಳು ತಮ್ಮ ಜೀವದ ಹಂಗನ್ನು ಬಿಟ್ಟು ಛಲದಿಂದ ರತ್ನದ ಜೊತೆಗೆ ತಮ್ಮ ಸುರಕ್ಷಿತ ಸ್ಥಳಕ್ಕೆ ಮರಳಿದರು.

**ಆಶಯ:**

ಕೋಟೆ ಮತ್ತು ಧವಳಗಿರಿ ಯಾನದ ಉತ್ಸಾಹ ಪಯಣಿಗರಲ್ಲಿ ವಿಸ್ಮಯವನ್ನು ಹುಟ್ಟಿಸಿ ಸಾವಿನ ಸಂಕೋಲೆಯಿಂದ ಪಾರಾಗುವುದಾಗಿದೆ. ನಿಸರ್ಗವು ತನ್ನ ಒಡಲಲ್ಲಿ ಗೌಪ್ಯವಾಗಿ ಅಡಗಿಸಿಟ್ಟುಕೊಂಡಿರುವ ಅಮೂಲ್ಯವಾದ ಸಂಪತ್ತನ್ನು ಮನುಷ್ಯ ತನ್ನ ಬುದ್ಧಿವಂತಿಕೆಯ ಬಲದಿಂದ ಹೊರತೆಗೆದರೂ ಅದನ್ನು ಉಳಿಸಿಕೊಳ್ಳಬೇಕಾದರೆ ಹಲವು ತೊಂದರೆಗಳಿಗೆ ಸಿಲುಕಬೇಕಾಗುತ್ತದೆ. ಇನ್ನು ಹಣ, ಸಂಪತ್ತಿನ ವಿಚಾರಕ್ಕೆ ಬಂದಾಗ ಚಿರಪರಿಚಿತರೇ ನಮಗೆ ಆಪತ್ತನ್ನು ತಂದೊಡ್ಡುವರು. ಇಂತವರ ವಿಚಾರಗಳಲ್ಲಿ ಬಹಳ ಎಚ್ಚರಿಕೆಯಿಂದಿರಬೇಕೆಂಬ ಆಶಯವನ್ನು ಈ ಕಥೆ ಧ್ವನಿಸುತ್ತದೆ.

**ಕದಿರನ ಕೋಟೆ:**

ಶಿವಮೊಗ್ಗೆಯ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರು ಇತಿಹಾಸ ವಿಷಯವನ್ನು ಬೋಧಿಸುತ್ತಿರುವಾಗ 10ನೇ ಶತಮಾನದಲ್ಲಿ ಕಟ್ಟಿರುವ ಕದಿರನ ಕೋಟೆಯ ಪ್ರಸ್ತಾಪ ಮಾಡಿದರು. ಈ ಕೋಟೆಗೆ ಪ್ರಯಾಣ ಬೆಳೆಸಬೇಕಾದ ಮಾರ್ಗ, ಕೋಟೆಯ ಇತಿಹಾಸ, ಪ್ರಸ್ತುತ ಕೋಟೆಯಲ್ಲಿ ನಡೆಯುತ್ತಿರುವ ಅವ್ಯವಹಾರಗಳು, ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ವಿಷಯವನ್ನೆಲ್ಲಾ ವಿದ್ಯಾರ್ಥಿಗಳಿಗೆ ತಿಳಿಸಿದರು. ಮೊದಲೆ ಕುತೂಹಲಿಗಳಾದ ಇತಿಹಾಸ ವಿದ್ಯಾರ್ಥಿಗಳು, ಅಲ್ಲಿಗೆ ಹೋಗಲೇಬೇಕು, ಅಲ್ಲಿನ ರಹಸ್ಯವನ್ನು ಭೇದಿಸಲೇಬೇಕೆಂದು ಪಟ್ಟು ಹಿಡಿದು, ಪ್ರಾಧ್ಯಾಪಕರ ಜೊತೆಗೂಡಿ ಕದಿರನ ಕೋಟೆಯತ್ತ ಪ್ರಯಾಣವನ್ನು ಬೆಳೆಸುವರು.

ಪ್ರಾಧ್ಯಾಪಕರಾದ ಪಾಟೀಲರು, ವಿದ್ಯಾರ್ಥಿಗಳಾದ ಶರ್ಮ, ಇವಾನ್, ಲೋಬೋ, ಸಲ್ಮಾ, ದೀಪ್ತಿಯವರೊಡಗೂಡಿ ಕದಿರನ ಕೋಟೆಯನ್ನು ಶೋಧನೆ ಮಾಡಲು ಪ್ರಯಾಣವನ್ನು ಕೈಗೊಂಡರು. ಕಾಡು–ಮೇಡಿನ ಕ್ಲಿಷ್ಟವಾದ ದಾರಿ, ಪ್ರಾಣಿಗಳ ಕಾಟ, ಯಾವುದನ್ನು ಲೆಕ್ಕಿಸದೆ ಎಲ್ಲರೂ ತುಂಬಾ ಉತ್ಸಾಹದಿಂದ ಕೋಟೆಯತ್ತ ದಾಪುಗಾಲಿಡುತ್ತಿದ್ದರು.

ಪಾಟೀಲರು ವಿದ್ಯಾರ್ಥಿಗಳಿಗೆ ಪ್ರಯಾಣದ ನಡುವೆ ಕೋಟೆಯ ಇತಿಹಾಸವನ್ನು ತಿಳಿಸುತ್ತಾ, ಈ ಕೋಟೆಯ ಮೂಲಪುರುಷ ಬುಚ್ಚನಾಯಕ. ಕದಿರ ಎಂಬ ಭೂತವು ಬೆಟ್ಟದ ಮೇಲೆ ಈ ಕೋಟೆಯನ್ನು ಕಟ್ಟಿತೆಂಬ ಪ್ರತೀತಿ ಇದೆ. ಪ್ರಸ್ತುತ ಈ ಕೋಟೆಯ ಸುತ್ತಲೂ ಹಿಂದಿನ ರಾಜರ, ಸತ್ತ ಅನೇಕ ಸೈನಿಕರ ಭೂತಗಳು ಓಡಾಡುತ್ತಿವೆಯಂತೆ ಹಾಗೂ ಕೋಟೆಯ ಬಳಿ ಸುಳಿದವರನ್ನು ಈ ಭೂತಗಳು ಬೆಂಬಿಡದೆ ಕಾಡುತ್ತವೆಯಂತೆ ಎಂದು ಕುತೂಹಲದ ಜೊತೆಗೆ ಭಯ ಮೂಡುವಂತೆ ವಿವರಿಸಿದರು.

ಕೋಟೆಗೆ ಪ್ರಯಾಣ ಬೆಳೆಸುವ ದಾರಿಯು ತುಂಬಾ ಕ್ಲಿಷ್ಟವಾಗಿದ್ದರಿಂದ

ಕೋಟೆಯ ಸುತ್ತಲೂ ಇರುವ ಪ್ರೇಕ್ಷಣೀಯ ಸ್ಥಳಗಳು, ರಹಸ್ಯ ಸ್ಥಳಗಳನ್ನು ಬಲ್ಲವನಾಗಿದ್ದ 'ಭೈರ' ಎಂಬ ವ್ಯಕ್ತಿಯನ್ನು ತಮಗೆ ಮಾರ್ಗದರ್ಶನ ನೀಡಲು ಪಾಟೀಲರು ತಮ್ಮ ಜೊತೆ ಕರೆದುಕೊಂಡರು. ಭೈರ ಕೋಟೆಯ ಸುತ್ತಮುತ್ತಲಿನ ಎಲ್ಲಾ ಪ್ರದೇಶಗಳನ್ನು ಚೆನ್ನಾಗಿ ಬಲ್ಲವನಾಗಿದ್ದರಿಂದ ಈತನ ಮಾತೇ ಇತಿಹಾಸ ಕುತೂಹಲಿಗಳಿಗೆ ವೇದವಾಕ್ಯವಾಗಿತ್ತು. ಈತ ಹೇಳಿದ ಜಾಗದಲ್ಲಿ ಊಟಮಾಡುವುದು, ಸ್ನಾನಮಾಡುವುದು, ಮಲಗುವುದು ಎಲ್ಲವೂ ಆಗಿತ್ತು.

ಭೈರನು ಎಲ್ಲರನ್ನು ಕತ್ತರಿ ಬಾಗಿಲಬಳಿ ಕರೆದುಕೊಂಡು ಬಂದು, ಇನ್ನು ಮುಂದೆ ಪ್ರಯಾಣ ಮಾಡಲು ಸಾಧ್ಯವಿಲ್ಲ ಕೋಟೆಯನ್ನು ಇಲ್ಲಿಂದಲೇ ನಿಂತು ನೋಡಬೇಕು ಎಂದಾಗ ವಿದ್ಯಾರ್ಥಿಗಳು ಏಕೆ ಎಂದು ಪ್ರಶ್ನಿಸುವರು. ಇದಕ್ಕೆ ಭೈರ ಕತ್ತರಿ ಬಾಗಿಲಿಗೆ ಯಾರು ಹೋಗಲು ಸಾಧ್ಯವಿಲ್ಲ, ಹೋದವರು ವಾಪಸ್ಸು ಬಂದಿಲ್ಲ ಎಂದು ಹೇಳಿ ವಿದ್ಯಾರ್ಥಿಗಳಲ್ಲಿ ಭಯ ಹುಟ್ಟಿಸುವನು.

ಭೈರನ ಮಾತು ಕೇಳಿದ ಲೋಬೋ ಮತ್ತು ಸಲ್ಮಾ ಕೋಟೆಯ ರಹಸ್ಯವನ್ನು ಭೇದಿಸಲೇಬೇಕೆಂಬ ಹಟದಿಂದ ಗುಂಪಿನಿಂದ ಬೇರ್ಪಟ್ಟು, ಕತ್ತಲಿನಿಂದಾವೃತವಾಗಿದ್ದ ಕೋಟೆಯನ್ನು ಪ್ರವೇಶಿಸುವರು. ಸಲ್ಮಾ ಅರಮನೆಯ ಎಲ್ಲ ಕೊಠಡಿಗಳಿಗೂ ಭೇಟಿ ನೀಡಿ ಬುಚ್ಚನಾಯಕನ ಜೊತೆ ಜೋರಾಗಿ ಮಾತನಾಡುವಳು. ನಂತರ ಬುಚ್ಚನಾಯಕ ಇವಳ ಮುಂದೆ ಬಂದಾಗ ಆ ವ್ಯಕ್ತಿಯನ್ನು ನೋಡಿ ಹೆದರಿ ಪ್ರಜ್ಞೆತಪ್ಪಿ ಬೀಳುವಳು. ಬುಚ್ಚನಾಯಕ ಸಲ್ಮಾಳನ್ನು ಹಾರೈಕೆ ಮಾಡುತ್ತಿದ್ದಾಗ ಅವನ ಕೈಗಳನ್ನು ಮುಟ್ಟಿ ಇದು ಭೂತವೋ ಮನುಷ್ಯನೋ ಎಂದು ಖಚಿತಪಡಿಸಿಕೊಂಡು ಅರಮನೆಯಿಂದ ಹೊರಬರುವಳು. ಇದಕ್ಕೆ ಪ್ರತಿಯಾಗಿ ಲೋಬೋ ಕೋಟೆಯ ಅರಮನೆಯ ಕೆಳಗೆ ಮುಸ್ತಫನ ಕಡೆಯವರು ಕಳ್ಳಭಟ್ಟಿ ತಯಾರಿಸುತ್ತಿದ್ದ ರಹಸ್ಯವನ್ನೆಲ್ಲಾ ತಿಳಿದು ಬರುತ್ತಿರುವಾಗ, ಸಲ್ಮಾ ಲೋಬೋನನ್ನು ಜೋರಾಗಿ ಕೂಗುವಳು ಇದನ್ನು ಕೇಳಿಸಿಕೊಂಡ ಮುಸ್ತಫನ ಸೈನ್ಯದವರು ಇವರಿಬ್ಬರನ್ನೂ ಬಂಧಿಸುವರು.

ಕಥೆಯ ಕೊನೆಯಲ್ಲಿ ಬುಚ್ಚನಾಯಕನು ಲೋಬೋ ಮತ್ತು ಸಲ್ಮಾಳನ್ನು ಬಿಡಿಸಿಕೊಂಡು ಬರುತ್ತಿರುವಾಗ ಮುಸ್ತಫನು ಇವರ ಮೇಲೆ ಬಾಂಬ್ ದಾಳಿಯನ್ನು ನಡೆಸುವನು. ಇದರಿಂದಾಗಿ ಕೋಟೆ ಮತ್ತು ಗುಹೆಗಳೆಲ್ಲವೂ ಕುಸಿದು ಇತಿಹಾಸ ಕುತೂಹಲಿಗಳ ಮೇಲೆ ಬಿದ್ದವು. ಎಲ್ಲರೂ ಅದರಡಿಯಲ್ಲಿ ಸಿಲುಕಿ, ಸಾವು ಬದುಕಿನ ನಡುವೆ ಹೋರಾಡುತ್ತಿರುವಾಗ ಬುಚ್ಚನಾಯಕ ಅವರನ್ನು ಪ್ರಾಣಾಪಾಯದಿಂದ ಪಾರುಮಾಡುವನು. ಆದರೆ ಇವಾನ್ ಮತ್ತು ಸಲ್ಮಾಳನ್ನು ಹೊರತುಪಡಿಸಿ ಎಲ್ಲರೂ ದೇಹದ ಒಂದೊಂದು ಅಂಗಗಳನ್ನು ಕಳೆದುಕೊಂಡಿದ್ದರು.

ಸಲ್ಮಾಳು ಇತಿಹಾಸ ಪ್ರಸಿದ್ಧ ಪಾಳು ಕೋಟೆಯಲ್ಲಿ ಒಬ್ಬನೇ ವಾಸಿಸುತ್ತಿದ್ದ

ಬುಚ್ಚನಾಯಕನ ಮನಃಪರಿವರ್ತನೆ ಮಾಡಿ ನೀವು ಸಮಾಜ ಜೀವಿಯಾಗಿ ಬದುಕಬೇಕೆಂಬ ತಿಳಿ ಹೇಳುವಳು. ಇದಕ್ಕೆ ಬುಚ್ಚನಾಯಕನೂ ಸಹ ಸಮ್ಮತಿಸಿ ಸಲ್ಮಾಳನ್ನು ಹಿಂಬಾಲಿಸಿ ಬರುವನು.

**ಆಶಯ:**

ಭೂತ ಅಥವಾ ದೆವ್ವ ಎಂಬ ಹೆಸರು ಕೇಳಿದೊಡನೆಯೇ, ಭಯಗೊಳ್ಳುವ ಮಕ್ಕಳು, ಈ ಕಥೆಯಲ್ಲಿನ ಭೂತದ ಕಲ್ಪನೆಯನ್ನು ಓದಿ ಹೆಚ್ಚು ಆಶ್ಚರ್ಯ ಹಾಗೂ ಭಯಗೊಂಡಿರಲೂಬಹುದು. ವಿದ್ಯಾರ್ಥಿಗಳು ಕೋಟೆ ಹತ್ತುವ ಸನ್ನಿವೇಶ, ಕತ್ತರಿಬಾಗಿಲಿನ ವರ್ಣನೆ, ಭೂತ ಬೆಟ್ಟದ ವರ್ಣನೆ, ಅರಮನೆಯಲ್ಲಿದ್ದ ಮರದ ಗೊಂಬೆಗಳೆಲ್ಲವೂ, ತಾವಾಗೆ ಜೀವ ತಳೆಯುವ ಬಗೆ, ಇವೆಲ್ಲವೂ ಸರಳ ನಿರೂಪಣೆಯಲ್ಲಿ ಅದ್ಭುತವಾಗಿ ಮೂಡಿ ಬಂದಿರುವುದನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

ಕದಿರನ ಕೋಟೆಯಲ್ಲಿ ದರೋಡೆಕಾರರು, ಕಳ್ಳ ಭಟ್ಟಿಯನ್ನು ತಯಾರಿಸಿ, ಅದನ್ನು ಬೇರೆಡೆಗೆ ಕಳುಹಿಸುತ್ತಿದ್ದ ಮಾಹಿತಿಯನ್ನು ಪತ್ತೆಹಚ್ಚಿ, ಸಮಾಜ ಘಾತುಕರನ್ನು ಪೊಲೀಸರಿಗೆ ವಶಪಡಿಸಿ ಕದಿರನ ದುರ್ಗಕ್ಕೆ ಹತ್ತಿದ್ದ ಕಳಂಕವನ್ನು ಈ ಇತಿಹಾಸ ಕುತೂಹಲಿಗಳು ತೊಡೆದು ಹಾಕಿದರು. ಹಿಂದಿನ ತಲೆಮಾರಿನ ಸಂಪ್ರದಾಯಗಳಿಗೆ ಬದ್ಧವಾಗಿ ಬಹಳ ನರಕಯಾತನೆಯಿಂದ, ಜೀವನವನ್ನು ನಡೆಸುತ್ತಿದ್ದ ಬುಚ್ಚ ನಾಯಕನನ್ನು ಸಲ್ಮಾ, "ನೀವು ನಿಮ್ಮ ಸಾಮ್ರಾಜ್ಯಕ್ಕೆ ನನ್ನನ್ನು ಪ್ರಜೆಯಾಗಿ ತೆಗೆದುಕೊಳ್ಳಿ ಅಥವಾ ನೀವೇ ನಮ್ಮ ಭಾರತ ಸಾಮ್ರಾಜ್ಯದ ಒಬ್ಬ ನಾಗರಿಕರಾಗಿ"[3] ಎಂದು ಮನಃ ಪರಿವರ್ತನೆ ಮಾಡಿ ಬುಚ್ಚ ನಾಯಕ ತನ್ನನ್ನು ಹಿಂಬಾಲಿಸಿ ಬರುವಂತೆ ಮಾಡಿದಳು.

ಸಮಾಜ ಘಾತುಕ ಶಕ್ತಿಗಳನ್ನು, ದುಷ್ಟರನ್ನು ಸಂಹರಿಸಿ, ನರಕಯಾತನೆಯ, ಕಳಂಕಿತ ಜೀವನವನ್ನು ನಡೆಸುತ್ತಿದ್ದ ವ್ಯಕ್ತಿಯನ್ನು ಪರಿವರ್ತನೆಮಾಡಿ, ಆತನೂ ಸಮಾಜಮುಖಿ ಜೀವನ ನಡೆಸಲು ಅನುವು ಮಾಡಿಕೊಡುವುದೇ ಈ ಕಥೆಯ ಮೂಲ ಆಶಯವಾಗಿದೆ.

ಹೀಗೆ ಈ ಮೂರೂ ಕಥೆಗಳಲ್ಲಿ ಬಿಂಬಿತವಾಗಿರುವ ಕುತೂಹಲ, ಆಶ್ಚರ್ಯ, ಭಯ, ವಿಸ್ಮಯ, ಸಾಹಸ ಪ್ರೌವೃತ್ತಿ, ಉತ್ಸಾಹ, ಛಲ, ಆಕರ್ಷಣೆ, ಹಟ, ಬದುಕಿನ ಅಭಯತೆ, ಸಂಶೋಧನಾ ಪ್ರವೃತ್ತಿ ಇವು ಕಥೆಯ ಉದ್ದಕ್ಕೂ ಮಕ್ಕಳ ಮನಸ್ಸನ್ನು ತನ್ನತ್ತ ಸೆಳೆಯುವಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತವೆ ಎಂಬುದನ್ನು ಎಚ್ಚೆಸ್ವಿ ಅವರು ವರ್ಣನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ.

## ಕೊನೆ ಟಿಪ್ಪಣಿಗಳು:

1. ವೆಂಕಟೇಶಮೂರ್ತಿ ಎಚ್. ಎಸ್. (2013). ಸಮಗ್ರ ಮಕ್ಕಳ ಸಾಹಿತ್ಯ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ. ಮೈಸೂರು. ಪು.ಸಂ. 332
2. ವೆಂಕಟೇಶಮೂರ್ತಿ ಎಚ್. ಎಸ್. (2013). ಸಮಗ್ರ ಮಕ್ಕಳ ಸಾಹಿತ್ಯ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ. ಮೈಸೂರು. ಪು.ಸಂ. 225
3. ವೆಂಕಟೇಶಮೂರ್ತಿ ಎಚ್. ಎಸ್. (2013). ಸಮಗ್ರ ಮಕ್ಕಳ ಸಾಹಿತ್ಯ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ. ಮೈಸೂರು. ಪು.ಸಂ. 276

## ಆಕರ ಗ್ರಂಥ:

1. ವೆಂಕಟೇಶಮೂರ್ತಿ ಎಚ್. ಎಸ್. (2013). ಸಮಗ್ರ ಮಕ್ಕಳ ಸಾಹಿತ್ಯ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ. ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.